



# ಅಂಬಾನಿ ಕುಟುಂಬದ ಮದುವೆಯೆಂಬ ಮಹಾ ಪ್ರಹಸನ



ಪ್ರಶ್ನೆ: ಭಾರತದ ಇತಿಹಾಸದಲ್ಲೇ ಅತಿ ದೀರ್ಘಾವಧಿ ಮದುವೆ ಯಾವುದು?
ಉತ್ತರ: ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ವಿವಾಹ.

–ಹೀಗೆ ಒಂದು ಜೋಕ್ ಸ್ಟ್ಯಾಂಡ್–ಅಪ್ ಕಾಮಿಡಿ ಶೋಗಳಲ್ಲೂ ಹರಿದಾಡುತ್ತಿದೆ. ಇಂತಹ ಜೋಕ್‌ಗೆ ಬೇಕಾದ ರಕ್ತ–ಮಾಂಸವನ್ನು ಈ ಮದುವೆ ಪ್ರಸಂಗ ತುಂಬಿದ್ದಂತೂ ನಿಜ. ಏಳು ತಿಂಗಳಿನಿಂದ ಮದುವೆ ಪೂರ್ವದ ಕಾರ್ಯಕ್ರಮಗಳ ಕುರಿತು ಮಾಧ್ಯಮ ವರದಿ ಮಾಡುತ್ತಲೇ ಬಂದಿತ್ತು. ಮದುವೆ ದಿನವಂತೂ ಸಾಕ್ಷಾತ್ ರಜನೀಕಾಂತ್ ಕೂಡ ಹೆಜ್ಜೆ ಹಾಕಿ, ಅಭಿಮಾನಿಗಳ ಟ್ರೋಲ್‌ಗೆ ಗುರಿಯಾದರು.

ಕಿಮ್ ಕರ್ದಾಶಿಯನ್ ದಂಪತಿ ಅಲ್ಲಿದ್ದರು. ಅವರೊಟ್ಟಿಗೆ ಹಿಂದಿ ಚಿತ್ರರಂಗದ ಅನೇಕರು ಫೋಟೊ ತೆಗೆಸಿಕೊಳ್ಳಲು ಮುಗಿಬಿದ್ದಿದ್ದರೆನ್ನುವ ಸುದ್ದಿಗೆ ಒಳ್ಳೆಯ ವ್ಯೂಸ್ ಬಂತು. ಬ್ರಿಟನ್‌ನ ಮಾಜಿ ಪ್ರಧಾನಿಗಳಾದ ಟೋನಿ ಬ್ಲೇರ್, ಬೋರಿಸ್ ಜಾನ್ಸನ್ ಕೂಡ ಅತಿಥಿಗಳ ಸಾಲಿನಲ್ಲಿ ಕುಳಿತಿದ್ದರು. ಡಬ್ಲ್ಯುಡಬ್ಲ್ಯುಎಫ್ ತಾರೆ ಜಾನ್ ಸೆನಾ ನೀಲಿ ಬಣ್ಣದ ಶೇರ್ವಾನಿ ಧರಿಸಿ, ಮುಗುಳುನಗುತ್ತಾ ವಿವಾಹ ಮಹೋತ್ಸವಕ್ಕೆ ಬಂದಿದ್ದು ಪುಟ್ಟ ಹೈಕಳಿಗೂ ಖುಷಿಯ ವಿದ್ಯಮಾನ. ಹಾಡುಗಾರ ಜಸ್ಟಿನ್ ಬೀಬರ್ ಅಲ್ಲಿದ್ದುದು ಸಂಗೀತಪ್ರೇಮಿಗಳಿಗೆ ಸಂತಸದ ಬೋನಸ್ಸು.

ಮಳೆಯಲ್ಲಿ ಮಿಂದು ತೊಪ್ಪೆಯಾಗಿದ್ದ ಮುಂಬೈ ರಸ್ತೆಗಳು ನಳನಳಿಸುತ್ತಿದ್ದವು. ಜಿಯೊ ವರ್ಲ್ಡ್ ಕನ್ವೆನ್ಷನ್ ಹಾಲ್‌ಗೆ ಸಂಪರ್ಕಿಸುವ ಕೆಲವು ರಸ್ತೆಗಳನ್ನು ಬೇರೆ ಜನರ ಸಂಚಾರಕ್ಕೆ ಬಂದ್ ಮಾಡಿ, ಈ ಮದುವೆ ಮಹೋತ್ಸವ ನಡೆದದ್ದು ಅದೇ ಹೊತ್ತಿನಲ್ಲಿ. ಏಕಕಾಲದಲ್ಲಿ 16 ಸಾವಿರ ಜನರನ್ನು ಒಂದೆಡೆ ಸೇರಿಸುವಷ್ಟು ವಿಶಾಲವಾದ ಹಾಲ್ ಅದು.

ಇಷ್ಟೆಲ್ಲ ದುಬಾರಿ ಸಂಗತಿಗಳನ್ನು ತುಳುಕಿಸುತ್ತಾ ಬಂದ ಮದುವೆ ಮುಗಿಯುವ ಹೊತ್ತಿಗೆ ಗ್ರಾಹಕರಿಗೆ ಜಿಯೊ ಮೊಬೈಲ್ ರೀಚಾರ್ಜ್ ದರಗಳನ್ನು ಏರಿಸಲಾಗಿತ್ತು. ಹೊಸದಾಗಿ ರೀಚಾರ್ಜ್ ಮಾಡಿಸುವ ಮಂದಿಯಲ್ಲಿ ಅನೇಕರು ಹೇಳಿದ್ದು: 'ನಾವೂ ಈ ಮದುವೆಗೆ ಮುಯ್ಯಿ ಕೊಡುತ್ತಿದ್ದೇವೆ. ಖರ್ಚಿನ ಹಣದಲ್ಲಿ ನಮ್ಮ ಪಾಲೂ ಇದೆ!' ■



■ ವಿಶಾಖ ಎನ್.

# ಸಂಭಾವನೆ ರಾಣಿಯರು ಯಾರು?

ಹಿಂದಿ ಚಿತ್ರರಂಗದಲ್ಲಿ ಅಧಿಕ ಸಂಭಾವನೆ ಪಡೆಯುವ ನಟಿ ಯಾರು ಎನ್ನುವ ಕುರಿತು ಚಿತ್ರರಂಗದ ಕೆಲವು ಮೂಲಗಳನ್ನು ಹುಡುಕಿ, ತಡಕಿ 'ಬಾಲಿವುಡ್ ಹಂಗಾಮ' ಇತ್ತೀಚೆಗೆ ಒಂದು ವರದಿ ಪ್ರಕಟಿಸಿತು.

ಅದರ ಪ್ರಕಾರ, ಸದ್ಯಕ್ಕೆ ಅತಿ ಹೆಚ್ಚು ಸಂಭಾವನೆ ಪಡೆಯುತ್ತಿರುವ ನಟಿ ದೀಪಿಕಾ ಪಡುಕೋಣೆ. ಡೇಟ್ಸ್ ಕೊಡುವ ಪ್ರಮಾಣಕ್ಕೆ ಅನುಗುಣವಾಗಿ ಅವರು ಗರಿಷ್ಠ 20 ಕೋಟಿ ರೂಪಾಯಿಯವರೆಗೆ ಸಂಭಾವನೆ ನಿಗದಿಪಡಿಸುತ್ತಾರೆ. 2023ರಲ್ಲಿ ಶಾರುಕ್ ಖಾನ್ ಜೊತೆಗೆ ಅವರು ನಟಿಸಿದ್ದ 'ಪಠಾಣ್', 'ಜವಾನ್' ಎರಡೂ ಸಿನಿಮಾಗಳು ಗೆಲುವು ಸಾಧಿಸಿದ್ದವು. ಈ ವರ್ಷ ಬಹುಭಾಷಾ ಚಿತ್ರ 'ಕಲ್ಕಿ' ಕೂಡ ಕಮಾಲ್ ಮಾಡಿದೆ. ಹೀಗಾಗಿ ಅವರ ಸಂಭಾವನೆಯ ಗ್ರಾಫ್‌ನಲ್ಲಿ ಇಳಿಕೆಯಾಗಿಲ್ಲ. 'ಸಿಂಗಂ ಎಗೇನ್' ಸಿನಿಮಾದಲ್ಲಿ ರಗಡ್ ಮಹಿಳಾ ಪೊಲೀಸ್ ಪಾತ್ರದಲ್ಲಿ ಅವರು ನಟಿಸುತ್ತಿರುವ ಸಂಗತಿ ಗೊತ್ತೇ ಇದೆ. ಗರ್ಭಿಣಿಯೂ ಆಗಿರುವ ಅವರು ಆ ಸಂದರ್ಭದಲ್ಲಿಯೂ ಒಪ್ಪಿಕೊಂಡ ಸಿನಿಮಾ ಕೆಲಸಗಳನ್ನು ಮುಗಿಸಿಕೊಟ್ಟಿರುವುದು ಅವರ ವೃತ್ತಿಪರತೆಗೆ ಹಿಡಿದ ಕನ್ನಡಿ ಎಂದೇ ಬಣ್ಣಿಸಲಾಗುತ್ತಿದೆ.

ದೀಪಿಕಾ ನಂತರ ಅಧಿಕ ಸಂಭಾವನೆ ಪಡೆಯುವವರ ಪಟ್ಟಿಯಲ್ಲಿ ಆಲಿಯಾ ಭಟ್ ಹೆಸರು ಕಾಣುತ್ತದೆ. ಅವರು ಗರಿಷ್ಠ ₹15 ಕೋಟಿ ಸಂಭಾವನೆ ಪಡೆಯುತ್ತಾರೆ. 'ಗಂಗೂಬಾಯಿ ಕಾಥಿಯಾವಾಡಿ', 'ಡಾರ್ಲಿಂಗ್ಸ್', 'ರಾಕಿ ಔರ್ ರಾಣಿ ಕೀ ಪ್ರೇಮ್ ಕಹಾನಿ' ಅವರು ನಟಿಸಿದ್ದ ಹಿಟ್ ಸಿನಿಮಾಗಳ ಪಟ್ಟಿಯಲ್ಲಿವೆ. 'ಜಿಗ್ರಾ', 'ಲವ್ ಅಂಡ್ ವಾರ್' ಸಿನಿಮಾಗಳಲ್ಲಿ ಅವರು ಅಭಿನಯಿಸುತ್ತಿದ್ದಾರೆ.

ಆಲಿಯಾ ಭಟ್ ನಂತರ ಸಂಭಾವನೆ ದರಪಟ್ಟಿಯಲ್ಲಿ ಕರೀನಾ ಕಪೂರ್ ಹೆಸರು ಮೇಲೆ ಇರುವುದನ್ನು ಕಂಡು ಅನೇಕರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಹೆಚ್ಚೇನೂ ಚಾಲ್ತಿಯಲ್ಲಿ ಇರದಿದ್ದ ಅವರು ಈಗಲೂ ಗರಿಷ್ಠ ₹11 ಕೋಟಿ ಸಂಭಾವನೆ ನಿಗದಿಪಡಿಸುತ್ತಿದ್ದಾರೆ. 'ಕ್ರೂ' ಸಿನಿಮಾದ ಯಶಸ್ಸೇ ಅದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ. ■

